ಇಂದು ದಿ:11.12.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಸಿಕೆಎಂ ವಕೀಲರಿಂದ :

ಜಲಜಾಕ್ಷಿರವರಿಂದ ಆರೋಪಿ ಅಕ್ರಮವಾಗಿ ಹಣ ಪಡೆದುಕೊಂಡು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ನಿಮ್ಮ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಚರ್ಚೆ ವಿಷಯವನ್ನಾಗಿ ಇಟ್ಟಿದ್ದಿರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಚರ್ಚೆ ವಿಷಯವನ್ನು ಇಟ್ಟಿರಲಿಲ್ಲ, ಅಕ್ರಮಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ದಿನಾಂಕ 22.08.2010ರಲ್ಲಿ ಅಕ್ರಮಗಳ ಬಗ್ಗೆ ಚರ್ಚೆ ಮಾಡಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಲು ನಿರ್ಣಯ ಕೈಗೊಂಡೆವು. ನಿವೃತ್ತ ಜಿಲ್ಲಾ ನ್ಯಾಯಾಧೀಶರ ಮುಂದೆ ಲೆಕ್ಕಪತ್ರಗಳು ಮತ್ತು ಆಡಿಟ್ ವರದಿಗಳನ್ನು ಹಾಜರುಪಡಿಸಿದ್ದೇವೆ. ಆರೋಪಿತನು 15,88,212/-ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಆಡಿಟ್ ವರದಿಯಲ್ಲಿ ನಮೂದಾಗಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರಿದು ಆದರೆ ದೊಡ್ಡಣ್ಣನು ಶಾಲೆಯ ಲೆಕ್ಕಪತ್ರವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂಬುದು ಆಡಿಟ್ ವರದಿಯಲ್ಲಿ ನಮೂದಾಗಿರುತ್ತದೆ ಎಂದು ಸ್ವಯಂ ನುಡಿಯುತ್ತಾರೆ. ದೊಡ್ಡಣ್ಣನು ಶಾಲೆಯ ಹಣಕಾಸಿನ ನಿರ್ವಹಣೆಯನ್ನು ವಹಿಸಿಕೊಂಡಿರುವುದಾಗಿ ಹಾಗೂ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲವೆಂದು ಆಡಿಟ್ ವರದಿಯಲ್ಲಿ ನಮೂದಾಗಿಲ್ಲವೆಂದರೆ ಸರಿಯಲ್ಲ, ದೊಡ್ಡಣ್ಣನಿಗೆ ಶಾಲೆಯ ಹಣಕಾಸಿನ ವ್ಯವಹಾರ ವಹಿಸಿದ ಬಗ್ಗೆಯಾಗಲೀ ಮತ್ತು ಅವರು ಸರಿಯಾಗಿ ನಿರ್ವಹಣೆ ಮಾಡಿಲ್ಲವೆಂಬ ಬಗ್ಗೆ ಯಾಗಲೀ ಆಡಿಟ್ ವರದಿಯಲ್ಲಿ ಎಲ್ಲೂ ನಮೂದಾಗಿಲ್ಲ ಎಂದರೆ ಸರಿಯಲ್ಲ,

ಆರೋಪಿತನ ವಿರುದ್ಧ ಲೋಕಾಯುಕ್ತರಿಗೆ ನಿಮ್ಮ ಸಂಸ್ಥೆಯವರು ದೂರು ಸಲ್ಲಿಸಿದ್ದರು ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ನಾನು ಸಲ್ಲಿಸಿಲ್ಲ ಆರೋಪಿತನ ಕಡೆಯವರಾದ ವಿಜಯ್‌ಕುಮಾರ್ ಎಂಬುವರು ದೂರು ಸಲ್ಲಿಸಿದ್ದರು ಎಂದು ನುಡಿದಿರುತ್ತಾರೆ. ಸೀಗೂರು ಗ್ರಾಮದ ವಿಜಯ್ ಕುಮಾರ್ ಬಿನ್ ಲಕ್ಷ್ಮಣಯ್ಯರವರು ಆರೋಪಿಯ ಸಂಬಂಧಿಕನೂ ಅಲ್ಲ ಸ್ನೇಹಿತನೂ ಅಲ್ಲವೆಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಸಂಬಂಧಿಕನೋ ಅಲ್ಲವೋ ನನಗೆ ಗೊತ್ತಿಲ್ಲ ಆದರೆ ಅವರ ಸ್ನೇಹಿತನಾಗಿರುತ್ತಾನೆ ಎಂದು ನುಡಿದಿರುತ್ತಾರೆ. ವಿಜಯ್‌ಕುಮಾರ್ ಬಿನ್ ಲಕ್ಷ್ಮಣಯ್ಯರವರು ಆರೋಪಿತನ ಸ್ನೇಹಿತನಲ್ಲ ಬದಲಾಗಿ ನನ್ನ ಸ್ನೇಹಿತ ಎಂದರೆ ಸರಿಯಲ್ಲ, ಆರೋಪಿಯು ಯಾವುದೇ ಖಾಸಗಿ ಟ್ರಸ್ಟ್‌ಗಳಲ್ಲಿ ಅವ್ಯವಹಾರ ಮಾಡಿಲ್ಲವೆಂದು ಲೋಕಾಯುಕ್ತರು ಆದೇಶ ಮಾಡಿರುತ್ತಾರೆ ಎಂದು ವಕೀಲರು ಒಂದು ದಾಖಲಾತಿಯ ದೃಢೀಕೃತನಕಲನುನ ತೋರಿಸಿ

ಮಾಡಿದ ಸಲಹೆಗೆ ಸಾಕ್ಷಿಯು ಆ ದಾಖಲೆಯಲ್ಲಿ ಆ ರೀತಿ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಡಿ-8 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಆರೋಪಿತನು ಈ ಪ್ರಸ್ತುತ ಕೇಸಿನಲ್ಲಿ ಬಚಾವಾಗುವ ಸಲುವಾಗಿ ವಿಜಯ್‌ಕುಮಾರ್ ಎಂಬುವರೊಂದಿಗೆ ಸೇರಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿ ಅಲ್ಲಿ ನಿರಪರಾಧಿ ಎಂದು ವರದಿ ತರುವ ಸಲುವಾಗಿ ಶಡ್ಯಂತರ ಮಾಡಿ ತಂದಿರುತ್ತಾರೆಂದು ಸ್ವಯಂ ನುಡಿಯುತ್ತಾರೆ. ಆರೋಪಿ ಶಡ್ಯಂತರ ಮಾಡಿ ವರದಿ ತಂದಿರುತ್ತಾರೆ ಎಂಬ ಬಗ್ಗೆ ಸಕ್ಷಮ ಪ್ರಾಧಿಕಾರದಲ್ಲಿ ಲೋಕಾಯುಕ್ತ ವರದಿಯನ್ನು ಪ್ರಶ್ನೆ ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರಿದು ಈ ನ್ಯಾಯಾಲಯದಲ್ಲಿ ಸದರಿ ಅಂಶವು ನಿರ್ಧಾರವಾಗಬೇಕೆಂದು ಈ ಕೇಸು ಹಾಕಿದ್ದೇವೆ ಎಂದು ಸ್ವಯಂ ನುಡಿಯುತ್ತಾರೆ. ಆರೋಪಿತನು ಶಡ್ಯಂತರ ಮಾಡಿ ಲೋಕಾಯುಕ್ತ ವರದಿ ತಂದಿರುತ್ತಾರೆಂದು ದೂರಿನಲ್ಲಿ ಹೇಳಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಈ ಕೇಸನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಲೋಕಾಯುಕ್ತ ಆದೇಶ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದ ಕಾರಣ ಸಾಕ್ಷಿಯ ಮುಂದುವರಿದ ಪಾಟೀಸವಾಲಿಗಾಗಿ ಕೇಸನ್ನು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

11-12-16

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.